ಗ್ರಾಮ ಸ್ವರಾಜ್ ಯೋಜನೆ

823 (168) ಶ್ರೀ ವಸಂತ ಬಂಗೇರ. ಕೆ (ಬೆಳ್ತಂಗಡಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಪಂಚಾಯತಿ ಸಬಲೀಕರಣ ಯೋಜನೆಯಾದ ಗ್ರಾಮ ಸ್ವರಾಜ್ ಯೋಜನೆಯಂತೆ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ 2008–09 ಮತ್ತು 2009–10ರಲ್ಲಿ ಈವರೆಗೆ ಬಿಡುಗಡೆಯಾದ ಅನುದಾನ ಎಷ್ಟು;

ಆ) ಸದರಿ ಅನುದಾನವನ್ನು ಯಾವ ಉದ್ದೇಶಗಳಿಗೆ ವಿನಿಯೋಗಿಸ ಲಾಗಿದೆ; ಯೋಜನೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಎಷ್ಟು ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಚಿವರು) :

ಅ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಬರುವ ಗ್ರಾಮ ಸ್ವರಾಜ್ – ಕರ್ನಾಟಕ ಪಂಚಾಯತಿ ಸಬಲೀಕರಣ ಯೋಜನೆಯು ವಿಶ್ವ ಬ್ಯಾಂಕ್ ಆರ್ಥಿಕ ನೆರವಿನಿಂದ ಅನುಷ್ಠಾನಗೊಳ್ಳುತ್ತಿರುವ ಒಂದು ಯೋಜನೆಯಾಗಿದೆ.

ಈ ಯೋಜನೆಗೆ ವಿಶ್ವ ಬ್ಯಾಂಕಿನವರು ಅಭಿವೃದ್ಧಿ ಸಾಲದ ರೂಪದಲ್ಲಿ ಧನ ಸಹಾಯ ಮಾಡುತ್ತಿದ್ದು ಕೇಂದ್ರ ಸರ್ಕಾರದಿಂದ ಯಾವುದೇ ಪ್ರತ್ಯೇಕ ಅನುದಾನ ದೊರಕುತ್ತಿಲ್ಲ. ಆದರೆ ವಿಶ್ವ ಬ್ಯಾಂಕಿನವರು ನೀಡುವ ಹಣವು ಕೇಂದ್ರ ಸರ್ಕಾರದ ಮೂಲಕ ಬಂದಿದ್ದು 2008–09 ಮತ್ತು 2009–10ರಲ್ಲಿ ಈವರೆಗೆ ಬಿಡುಗಡೆಯಾದ ಅನುದಾನದ ವಿವರ ಈ ಕೆಳಗಿನಂತಿದೆ.

ಆರ್ಥಿಕ ಸಾಲು	ಈವರೆಗೆ ಬಿಡುಗಡೆಯಾದ ಅನುದಾನ (ರೂ. ಕೋಟಿಗಳಲ್ಲಿ)
2008–09	128.49
2009–10	58.77
ಒಟ್ಟು	**187.26**

ಆ) (1) ಗ್ರಾಮ ಸ್ವರಾಜ್ ಯೋಜನೆಯ ಅನುದಾನವನ್ನು ರಾಜ್ಯದ ಅತ್ಯಂತ ಹಿಂದುಳಿದ 39 ತಾಲ್ಲೂಕುಗಳಲ್ಲಿ ಬರುವ 1341 ಗ್ರಾಮ ಪಂಚಾಯಿತಿಗಳಲ್ಲಿ, ಗ್ರಾಮ ಪಂಚಾಯತಿಗಳು ತಮ್ಮ ಮೊದಲಿನ ಸ್ಥಿತಿಯನ್ನು ಸುಧಾರಿಸಿಕೊಳ್ಳಲು ನೆರವಾಗುವಂತಹ ಗ್ರಾಮೀಣ ಮೂಲಭೂತ ಸೌಕರ್ಯ ಗಳನ್ನು ಒದಗಿಸುವ ಅಭಿವೃಧಿ ಕಾಮಗಾರಿಗಳಾದ ಗ್ರಾಮಗಳಲ್ಲಿ ರಸ್ತೆ, ಚರಂಡಿ, ಬೀದಿ ದೀಪ, ಕುಡಿಯವ ನೀರಿನ ವ್ಯವಸ್ಥೆ, ಹಾಗೂ ಇತರೆ ಆಸ್ತಿ ನಿರ್ಮಾಣವಾಗುವಂತಹ ಮತ್ತು ಗ್ರಾಮಗಳಿಗೆ ಅಗತ್ಯವಿರುವ ಕಾಮಗಾರಿ ಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

(2) ಇದಲ್ಲದೇ ಪಂಚಾಯತ್‌ರಾಜ್ ಸಂಸ್ಥೆಗಳ ಸಾಮರ್ಥ್ಯಾಭಿವೃದ್ಧಿ ಹೆಚ್ಚು ಮಾಡುವ ಚಟುವಟಿಕೆಗಳನ್ನು ಕೈಗೊಳ್ಳಲು ಅನುಕೂಲವಾಗುವಂತೆ ರಾಜ್ಯದ 175 ತಾಲ್ಲೂಕು ಕೇಂದ್ರಗಳಲ್ಲಿ ಸಾಮರ್ಥ್ಯ ಸೌಧ ಕಟ್ಟಡಗಳನ್ನು ನಿರ್ಮಾಣ ಮಾಡಲಾಗುತ್ತಿದೆ.

(3) ಯೋಜನೆಯ ಅನುದಾನದಿಂದ ಅಬ್ದುಲ್ ನಜೀರ್‌ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಮೈಸೂರು ಇವರ ಸಹಯೋಗದಲ್ಲಿ ಪಂಚಯತ್ ರಾಜ್ ಸಂಸ್ಥೆಗಳ ಭಾಗೀದಾರರಿಗೆ ಹಲವು ಹಂತದ ತರಬೇತಿ ಕಾರ್ಯಕ್ರಮ ಗಳನ್ನು ನೀಡುವುದರ ಮೂಲಕ ಅವರ ಸಾಮಾರ್ಥ್ಯಾಭಿವೃದ್ಧಿಗೆ ಕ್ರಮವಹಿಸಲಾಗಿದೆ.

(4) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬರುವ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಈ ಯೋಜನಾ ವತಿಯಿಂದ ಸಾಮರ್ಥ್ಯ ಸೌಧ ಕಟ್ಟಡಗಳನ್ನು ನಿರ್ಮಾಣ ಮಾಡಲು ಕ್ರಮವಹಿಸಿ ಐದು ತಾಲ್ಲೂಕುಗಳಿಗೆ ಇದುವರೆಗೆ ರೂ.30.00 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿದೆ ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ.

ಕ್ರ ಸಂ.	ತಾಲ್ಲೂಕು	ಬಿಡುಗಡೆ ಗೊಳಿಸಿದ ಅನುದಾನ ರೂ. ಲಕ್ಷಗಳಲ್ಲಿ.
1	ಬೆಳ್ತಂಗಡಿ	6.00
2	ಬಂಟ್ವಾಳ	6.00
3	ಮಂಗಳೂರು	6.00
4	ಪುತ್ತೂರು	6.00
5	ಸುಳ್ಯಾ	6.00
	ಒಟ್ಟು	30.00